ಹೇಳುತ್ತಿದ್ದೇನೆ ಆರ್ಡಿನರಿ ಬಸ್ಸುಗಳನ್ನು ಹೆಚ್ಚು ಮಾಡುತ್ತಿದ್ದೇವೆಯೇ ಹೊರತು ಪುಷ್ಪಕ್ ಬಸ್ಸುಗಳನ್ನು ಹೆಚ್ಚು ಮಾಡುತ್ತಿಲ್ಲ, ಬೇಕಾದರೆ ತಮಗೆ ಇದರ ಅಂಕಿ-ಅಂಶಗಳನ್ನು ಕೊಡುತ್ತೇನೆ. ಇಲಾಖೆಯಲ್ಲಿ ಸೋರಿಕೆಯಾಗುತ್ತಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹತ್ತರಿಂದ ಹನ್ನೆರಡು ಪರ್ಸೆಂಟ್ ಸೋರಿಕೆಯಾಗುತ್ತಿದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದಕಾರಣ ಅವರ ಮೇಲೆ ಕಾನೂನಿನ ಪ್ರಕಾರ ಯಾವ ರೀತಿ ಕ್ರಮ ತೆಗೆದುಕೊಳ್ಳಬಹುದು ಆ ರೀತಿ ಕ್ರಮ ತೆಗೆದುಕೊಂಡಿದ್ದೇವೆ. ಮುಂದೆಯೂ ಸಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅದಕ್ಕೋಸ್ಕರವಾಗಿ, for the first time in the country, ಈ ವರ್ಷ ಬಿಎಂಟಿಎಸ್ ಬ್ರೇಕ್ ಇವನ್ ಆಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹನಿ ನೀರಾವರಿ ಯೋಜನೆ

133 - ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರಾ?

ಅ) 1994 ರಿಂದ 1998 ರವರೆಗೆ ಹನಿ ನೀರಾವರಿ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಒದಗಿಸಲಾದ ಅನುದಾನ ಎಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು)

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) 1994 ರಿಂದ 1998 ರವರೆಗೆ ಹನಿ ನೀರಾವರಿಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ (ಒಟ್ಟು ರೂ. 204.188 ಲಕ್ಷಗಳನ್ನು) ಒದಗಿಸಲಾದ ಅನುದಾನಕ್ಕೆ ತಾಲ್ಲೂಕುವಾರು ವಿವರ ಗಳನ್ನು ಅನುಬಂಧ (1) ರಲ್ಲಿ ಒದಗಿಸಲಾಗಿದೆ.

ಅನುಬಂಧ 1

1994 ರಿಂದ 1998ರವರೆಗೆ ಹನಿ ನೀರಾವರಿ ಯೋಜನೆಯಲ್ಲಿ ಒದಗಿಸಲಾದ ಅನುದಾನದ ವಿವರ (ತಾಲ್ಲೂಕುವಾರು) (ದ.ಕ)

ಕ್ರ.ಸಂ.	ತಾಲ್ಲೂಕುಗಳ ಹೆಸರು	1994-95	1995-96	1996-97	1997-98
1.	ಮಂಗಳೂರು	1,98,992.00	4,56,446.00	87,770.00	2,80,047.00
2.	ಉಡುಪಿ	1,98,652.00	6,26,921.00	8,70,200.00	9,06,888.00
3.	ಕುಂದಾಪುರ	90,845.00	4,25,767.00	8,55,895.00	9,56,369.00
4.	ಕಾರ್ಕಳ	1,93,362.00	4,82,666.00	7,77,664.00	5,18,297.00
5.	ಬೆಳ್ತಂಗಡಿ	3,87,151.00	8,47,727.00	7,95,813.00	5,25,921.00
6.	ಸೂಳ್ಯಾ	2,53,813.00	2,89,431.00	10,15,568.00	5,22,957.00
7.	ಪುತ್ತೂರು	2,51,813.00	10,73,146.00	16,73,986.00	10,04,858.00
8.	ಬಂಟ್ವಾಳ	3,99,759.00	11,40,053.00	16,18,356.00	9,91,713.00
	ಒಟ್ಟು	**19,74,387.00**	**53,42,157.00**	**76,95,252.00**	**54,07,050.00**

ಶ್ರೀ ಎಸ್. ಅಂಗಾರ : ಸನ್ಮಾನ್ಯ ಅಧ್ಯಕ್ಷರೆ, 1994-95ರಲ್ಲಿ ಹತ್ತೊಂಭತ್ತು ಲಕ್ಷದ ಮುನ್ನೂರ ಎಂಭತ್ತೇಳು ಸಾವಿರ ರೂಪಾಯಿಗಳ ಅನುದಾನವನ್ನು ಒದಗಿಸಿದ್ದೇವೆ ಎಂದು ಹೇಳುತ್ತಿದ್ದಾರೆ. ಅದೇ ರೀತಿಯಲ್ಲಿ 1995-96ರಲ್ಲಿ 53 ಲಕ್ಷದ 42 ಸಾವಿರದ 152 ರೂಪಾಯಿಗಳನ್ನು ಮತ್ತು 1996-97ರಲ್ಲಿ 76ಲಕ್ಷದ 95 ಸಾವಿರದ 552 ರೂಪಾಯಿಗಳನ್ನು ಮತ್ತು 1997-98ರಲ್ಲಿ 57 ಲಕ್ಷದ 750 ರೂಪಾಯಿ ಅನುದಾನವನ್ನು ಒದಗಿಸಿದ್ದೇವೆ ಎಂದು ಮಾಹಿತಿ ಕೊಟ್ಟಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಗೆ ಅನೇಕ ಕಡೆ ರೈತ ಫಲಾನುಭವಿಗಳಿಗೆ ಹನಿ ನೀರಾವರಿಯಲ್ಲಿ ಸಬ್ಸಿಡಿ ಬರುವುದು ಬಾಕಿ ಇದೆ. ಆದರೆ ಸಬ್ಸಿಡಿಯನ್ನು ಎಷ್ಟು ಸಮಯದಲ್ಲಿ ತಾವು ಒದಗಿಸುವಿರಿ ಎಂದು ಸರಿಯಾದ ಮಾಹಿತಿಯನ್ನು ನೀಡಬೇಕು. ಅದೇ ರೀತಿ ಹನಿ ನೀರಾವರಿ ಯೋಜನೆಯ ಕೆಲಸವನ್ನು ಒಬ್ಬನೇ ಗುತ್ತಿಗೆದಾರನಿಗೆ ಕೊಡಬೇಕು? ಫಲಾನುಭವಿ ರೈತರಿಗೆ ಏಕೆ ಕೊಡಬಾರದು? ಆದಕಾರಣ ಅದಕ್ಕೆ ನಿರ್ದಿಷ್ಟವಾದಂತಹ ಉತ್ತರವನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ : ಸನ್ಮಾನ್ಯ ಅಧ್ಯಕ್ಷರೆ, ಹನಿ ನೀರಾವರಿ ಯೋಜನೆಗೆ ಹಣ ಒದಗಿಸುವುದಕ್ಕೆ ಯಾವುದೇ ರೀತಿಯಾದಂತಹ ತೊಂದರೆ ಇಲ್ಲ. ಆದರೆ ಅದ್ಕಕೆ ಸಂಬಂಧಪಟ್ಟಂತಹ ಅಧಿಕಾರಿಗಳು ಇದಕ್ಕೆ ರೈತ ಫಲಾನುಭವಿಗಳು ಯಾರಿದ್ದಾರೆ ಅವರು ಕೆಲಸ ಪೂರ್ಣಗೊಳಿಸಿದ ನಂತರ ಅವರಿಂದ ಸರ್ಟಿಫೈ ಮಾಡಿ, ಒಂದು ಯುಟಿಲೈಸೇಷನ್ ಸರ್ಟಿಫಿಕೇಟ್ ಕಳುಹಿಸಿಕೊಡಬೇಕು, ನಮ್ಮ ಸೆಕ್ರೆಟರಿಯೇಟ್‌ಗೆ. ಅಲ್ಲಿಗೆ ಬಂದರೆ ಹಣ ಬಿಡುಗಡೆ ಮಾಡುವುದಕ್ಕೆ ಯಾವ ತೊಂದರೆಯೂ ಇಲ್ಲ, ಅಲ್ಲದೆ ಹಣದ ಕೊರೆತೆಯೂ ಸಹ ಇಲ್ಲ. ಆದಕಾರಣ ಯಾವ ಕಾರಣಕ್ಕೋಸ್ಕರ ವಿಳಂಬವಾಗಿದೆ ಎಂದು ವಿಚಾರಿಸುತ್ತೇನೆ. ಹಣ ಬಿಡುಗಡೆ ಆಗದಿದ್ದರೆ, ತಕ್ಷಣ ಹಣ ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಮತ್ತು ಇದರ ಜೊತೆಗೆ ಒಬ್ಬರೇ ಗುತ್ತಿಗೆದಾರರಿಗೆ ಕೊಟ್ಟಿದ್ದಾರೆ ಎಂಬ ಆರೋಪ ಮಾಡುತ್ತಿದ್ದೀರಿ, ಆದರೆ ಫಲಾನುಭವಿ ರೈತರಿಗೆ ಗುತ್ತಿಗೆಯನ್ನು ಕೊಡುವುದಕ್ಕೆ ಬರುವುದಿಲ್ಲ. ಕಾಂಪಿಟೇಷನ್ ಕರೆಯುತ್ತೇವೆ, ಯಾರು ಚೀಪಾಗಿ ಕೊಡುತ್ತಾರೆ ಅವರಿಗೆ ವಹಿಸುತ್ತೇವೆ. ರೈತರೇ ತೆಗೆದುಕೊಳ್ಳುವುದಕ್ಕೆ ಏನು ತೊಂದರೆಯಾಗುತ್ತದೆ ಎಂದರೆ, ಇದೊಂದು ಹೊಸ ತಂತ್ರ ವಿಧಾನ, ಆದಕಾರಣ ಈ ವಿಧಾನ ಗೊತ್ತಿಲ್ಲದೆ ನಿಷ್ಪ್ರಯೋಜನ ಆಗುವುದೇ ಜಾಸ್ತಿ. ಆದುದರಿಂದ ಸಂಬಂಧಪಟ್ಟಂತಹ ಕಂಪನಿಗಳಿಗೆ ವಹಿಸಿದ್ದೇವೆ. ಇನ್ನು 5-6 ವರ್ಷಗಳ ನಂತರ ರೈತರೇ ತೆಗೆದುಕೊಳ್ಳುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಏಕೆಂದರೆ ಇನ್ನು 5 ವರ್ಷದಲ್ಲಿ ಎಲ್ಲಾ ಸೆಪರೇಟ್ ಆದರೆ ಅವರನ್ನೆಲ್ಲಾ ವಿತ್‌ಡ್ರಾ ಮಾಡಿ, ರೈತರು ಎಲ್ಲಿಗೆ ಬೇಕೋ ಅಲ್ಲಿಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಸಧ್ಯಕ್ಕೆ ರೆಸ್‌ಪಾನ್ಸಿಬಿಲಿಟಿ ಫಿಕ್ಸ್ ಮಾಡುವ ಕಾರಣದಿಂದ, ಹೊಸ ತಂತ್ರ ವಿಧಾನ ಆಗಿರುವುದರಿಂದ ಥ್ರೂ ಕಂಪನಿ ಮುಖಾಂತರ ಮಾಡುತ್ತಿದ್ದೇವೆ, ಅಲ್ಲಿ ಏನಾದರೂ ಲೋಪದೋಷಗಳು ಇದ್ದರೆ, ದಯವಿಟ್ಟು ನನ್ನ ಗಮನಕ್ಕೆ ತನ್ನಿ. ಅಂಥವರ ಮೇಲೆ ಸೂಕ್ತವಾದಂತಹ ಕ್ರಮಕೈಗೊಂಡು ರೈತರಿಗೆ ಅನ್ಯಾಯವಾಗದಂತಹ ರೀತಿಯಲ್ಲಿ ನೋಡಿಕೊಳ್ಳುತ್ತೇವೆ ಎಂಬ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ.